## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್ 419/2025

ಪಿಡಬ್ಲ್ಯು-1

**ದಿನಾಂಕ: 17/03/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ವಕೀಲರು:**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳು ನನಗೆ ತಿಳಿದಿದ್ದು ಹಾಗೂ ಅವು ಸತ್ಯವಾಗಿರುತ್ತವೆ.

ನನ್ನ ದಾವೆಗೆ ಸಂಬಂಧಪಟ್ಟಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

| ದಾಖಲಾತಿಗಳು | ನಿಶಾನೆ |
|---|---|
| ಎರಡು ನೋಟರೀಕೃತ ಅಂಕಪಟ್ಟಿಗಳು | ನಿಪಿ 1 ಮತ್ತು 2 |
| ಆನ್ ಲೈನ್ ಜಾತಿ ಪ್ರಮಾಣ ಪತ್ರ | ನಿಪಿ 3 |
| ನೋಟರೀಕೃತ ಜನನ ಪ್ರಮಾಣ ಪತ್ರ | ನಿಪಿ 4 |
| 2010-11 ನೇ ಸಾಲಿನ ಅಂಕಪಟ್ಟಿ | ನಿಪಿ 5 |
| 2017-18 ನೇ ಸಾಲಿನ ಅಂಕಪಟ್ಟಿ | ನಿಪಿ 6 |
| 2018-19 ನೇ ಸಾಲಿನ ಅಂಕಪಟ್ಟಿ | ನಿಪಿ 7 |
| ಒಂದು ನೋಟರೀಕೃತ ಆಧಾರ್ ಕಾರ್ಡ್ | ನಿಪಿ 8 |

ಮೇಲ್ಕಂಡ ದಾಖಲಾತಿಗಳನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅವುಗಳನ್ನು ನಿಶಾನಿಕರೆಸಲಾಗಿದೆ.

**ಪಾಟಿ ಸವಾಲು: ಮಾನ್ಯ ಎ.ಜಿ.ಪಿ ಮತ್ತು 17 ನೇ ಪ್ರತಿವಾದಿ ಪರ ವಕೀಲರಿಂದ:**

ನಾನು ಈ ದಾವೆಯನ್ನು ನನ್ನ ಹೆಸರನ್ನು ರೋಹಿತ್ ಡಿ ಅಟರನ್ಸ್ ಎಂದು ಬದಲಾವಣೆ ಕೋರಿ ಸಲ್ಲಿಸಿರುತ್ತೇನೆ. ನನ್ನನ್ನು ಶಾಲೆಗೆ ದಾಖಲಿಸುವಾಗ ನನ್ನ ಪೋಷಕರು

ನೀಡಿರುವ ಮಾಹಿತಿಯನ್ನು ಆಧರಿಸಿ ನನ್ನ ಹೆಸರನ್ನು ನಾವು ಸೂಚಿಸಿದಂತೆ ರೋಹಿತ್ ಜಿ.ಎಸ್ ಎಂದು ಶಾಲಾ ದಾಖಲಾತಿಗಳಲ್ಲಿ ನಮೂದಿಸಿ ನಿರ್ವಹಿಸಿರುವುದರಿಂದ ಪ್ರತಿವಾದಿಗಳ ಯಾವುದೇ ನ್ಯೂನ್ಯತೆ ಮತ್ತು ಹೊಣೆಗಾರಿಕೆ ಇರುವುದಿಲ್ಲ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಕೇಳಿರುವಂತೆ ರೋಹಿತ್ ಡಿ ಅಟರನ್ಸ್ ಎಂದು ಬದಲಾಯಿಸಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪೋಷಕರ ಮಾಹಿತಿಯನ್ನು ಆಧರಿಸಿ ದಾಖಲೆಗಳನ್ನು ನಿರ್ವಹಿಸಿರುವುದರಿಂದ ಪ್ರತಿವಾದಿಗಳ ಯಾವುದೇ ತಪ್ಪು ಕೊಂದು ಅಥವಾ ಇನ್ನ್ಯಾವುದೇ ಪ್ರಮಾದ ನ್ಯೂನತೆ ಇರದೇ ಇದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶವನ್ನು ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ